ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುವುದು, ಇದರಲ್ಲಿ ಬಹಳ ಕಷ್ಟವಿದೆ. ಒಂದೊಂದು ಪರಿಸ್ಥಿತಿ ನಮ್ಮ ಹತೋಟಿಯಲ್ಲಿ ಇರುವುದಿಲ್ಲ. 500 ಕೆ. ವಿ. ಟ್ರಾನ್ಸ್‌ಫಾರ್ಮರ್ ತೆಗೆದುಕೊಂಡು ಹೋದಾಗ ಅದು ಫ್ಯೂಲ್ಯೂರ್ ಆಗಿದೆ. ಆದ್ದರಿಂದ ಆ ಪರಿಸ್ಥಿತಿ ಬಂದಿದೆ. ಅದಕ್ಕೆ ಹೆಚ್ಚಿನ ಕೆ.ವಿ. ಯ ಟ್ರಾನ್ಸ್‌ಫಾರ್ಮರ್ ಹಾಕಬೇಕಾಗುತ್ತದೆ.

ಶ್ರೀ ಎನ್. ಎಲ್. ಬೆಲ್ಲದ್.—ಇದೇ ರೀತಿ ವಿದ್ಯುಚ್ಛಕ್ತಿ ಸರಬರಾಜು ವಾರದಲ್ಲಿ 3-4 ಬಾರಿ ಬಂದ್ ಆಗಿರುತ್ತದೆ. ಉದಾಹರಣೆಗೆ ರಾಣೆಬೆನ್ನೂರಿನಲ್ಲಿ ವಾರದಲ್ಲಿ ನಾಲ್ಕು ದಿವಸ ವಿದ್ಯುಚ್ಛಕ್ತಿ ಸರಬರಾಜು ಆಗಲಿಲ್ಲ. ಅದಕ್ಕೆ ಕಾರಣ ಕೇಳಿದರೆ ಹರಿಹರದ ಟ್ರಾನ್ಸ್‌ಫಾರ್ಮರ್‌ನ ಕೆಪಾಸಿಟಿ ಕಡಿಮೆಯಾಗಿದೆ, ಮತ್ತು ಎರ್ನಾ ಕಡೆ ವಿದ್ಯುಚ್ಛಕ್ತಿ ಸರಬರಾಜು ಮಾಡುವುದರಿಂದ ತೊಂದರೆಯಾಗಿದೆ ಎಂದು ಹೇಳುತ್ತಾರೆ. ಈ ತೊಂದರೆ ಹೀಗೆ ಮುಂದುವರಿದರೆ ರೈತರಿಗೆ ಬಹಳ ಲುಕ್ಸಾನು ಆಗುತ್ತದೆ. ಈ ಬಗ್ಗೆ ಏನಾದರೂ ತೀವ್ರ ಆಲೋಚನೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ನಾನು ಒಪ್ಪಿಕೊಂಡಿದ್ದೇನೆ. ಎಲ್ಲೆಲ್ಲಿ ಲೋಡ್ ಹೆಚ್ಚಾಗಿದೆ, ಅದನ್ನು ತಿಳಿದುಕೊಂಡು ಹೆಚ್ಚಿನ ಪ್ರಮಾಣದಲ್ಲಿ, ಎಲೆಕ್ಟ್ರಿಸಿಟಿ ಬೋರ್ಡಿನವರು ಒದಗಿಸುತ್ತಿದ್ದಾರೆ, ಮತ್ತು ಎಲ್ಲೆಲ್ಲಿ ಲೋಡ್ ಅವಶ್ಯಕತೆ ಇದೆಯೆಂದು ನೋಡಿಕೊಂಡು ಕಳಿಸುತ್ತಾರೆ.

Pension Benefits to Chairman and Members of P.S.C.

*Q.—672. Sri S. S. ARAKERI (Ballolli).—

Will the Chief Minister be pleased to state.—

(*a*) the number of retired Chairman and Members of the Mysore Public Service Commission that get the pension benefits under recently promulgated rules and who they are ;

(*b*) whether the Chairman and two Members of the first Mysore Public Service Commission are getting the pension benefits ; if not the reasons for the exclusion ;

(*c*) whether it is a fact that a Member of the Mysore Public Service Commission who resigned recently without serving full period, gets the pension benefits ;

(*d*) the action Government proposes to take to provide pension benefits to the Chairman and Members of First Mysore Public Service Commission ?

*A.—Sri S. NIJALINGAPPA (Chief Minister).—

(*a*) Nil.
(*b*) No, as the Regulations were issued only recently.
(*c*) Yes, he is held eligible under the Regulations.
(*d*) Does not arise as the Regulations are prospective in effect.

Sri S. S. ARAKERI.—Whether our Government is aware of the fact that the Central Government has given pension benefit to the Union Public Service Commission Members with retrospective effect ?

ಶ್ರೀ ಎಸ್. ನಿಜಲಿಂಗಪ್ಪ.—ಆ ವಿಚಾರ ತಿಳಿಯದು.

Sri S. S. ARAKERI.—When was the Mysore Regulation passed ?

Sri S. NIJALINGAPPA.—The regulation was passed in January 18th of this year.

Sri G. DUGGAPPA.—Whether the Mysore Government will also consider the possibility of giving effect to this benefit with retrospective effect ?

ಶ್ರೀ ಎಸ್. ನಿಜಲಿಂಗಪ್ಪ.—ಆ ರೆಗ್ಯುಲೇಶನ್ ಹಿಂದಿನದಕ್ಕೆ ಅನ್ವಯಿಸುವುದಿಲ್ಲ, ಅದನ್ನು ಯೋಚನೆ ಮಾಡಬೇಕಾಗುತ್ತದೆ. ಈಗಿರುವ ಕಾನೂನು ಪ್ರಕಾರ ಹಿಂದೆ ಇದ್ದವರಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಕೇಂದ್ರ ಸರ್ಕಾರದವರು ಅಲ್ಲಿರತಕ್ಕಂತಹ ಪಬ್ಲಿಕ್‌ಸರ್ವಿಸ್ ಮೆಂಬರುಗಳಿಗೆ ಕೊಟ್ಟಿದ್ದರೆ, ಇಲ್ಲಿಯೂ ಅದನ್ನು ಏಕೆ ಅನ್ವಯಿಸಲು ಆಗುವುದಿಲ್ಲ ?

ಶ್ರೀ ಎಸ್. ನಿಜಲಿಂಗಪ್ಪ.—ಜವಾಬು ಆಗಲೇ ಕೊಟ್ಟಿದ್ದೇನೆ.

Sri H. SIDDAVEERAPPA.—Are not the Members of the Public Service Commission non-officials some of them ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಗೊತ್ತೇ ಇದ್ದ ವಿಚಾರ.

Sri H. SIDDAVEERAPPA.—Sir, what is the reason and by which process has the question of giving pension to the non-officials arisen and if it is on any other grounds, will that be followed in the case of the other non-officials who are Ministers ? will they also be given pensions ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಒಳ್ಳೆಯ ಪ್ರಶ್ನೆ. ಯೋಚನೆ ಮಾಡಬೇಕಾಗುತ್ತದೆ. ಯೋಚನೆ ಮಾಡೋಣ.

ಶ್ರೀ ಎಸ್. ಗೋಪಾಲಗೌಡ.—ಈ ಅಯೋಗ ರಚನೆಯಾಗಿ ಅನೇಕ ವರ್ಷವಾದರೂ, ನಿಬಂಧನೆಗಳನ್ನು ರಚನೆ ಮಾಡುವುದಕ್ಕೆ, ಜಾರಿಗೆ ಕೊಡುವುದಕ್ಕೆ ಇಷ್ಟೊಂದು ತಡವಾಗಲು ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ನಿಬಂಧನೆ ಆಗಿ ಜಾರಿಯಲ್ಲಿ ಇದೆ. ಪ್ರಶ್ನೆ ಬಂದಿರತಕ್ಕದ್ದು ಪೆನ್ಷನ್ ಕೊಡುವ ವಿಚಾರ. ಈ ವರ್ಷದ ಜನವರಿ 18ನೇ ತಾರೀಕಿಗೆ ತೀರ್ಮಾನ ಮಾಡಿದ್ದಾರೆ. ಹಿಂದಿನವರಿಗೆ ಕೊಡಬೇಕೇ, ಬೇಡವೇ ಎಂಬ ಪ್ರಶ್ನೆ ಬಂದಿದೆ. ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಶಿವಪ್ಪ.—ಈ ತೀರ್ಮಾನಕ್ಕೆ ಇರುವ ಪವಿತ್ರತೆ ಏನು ?

ಶ್ರೀ ಎಸ್. ನಿಜಲಿಂಗಪ್ಪ.—ಅದರಲ್ಲಿ ಪವಿತ್ರವೇನು ; ಅವರಿಗೆ ಪೆನ್ಷನ್ ಸಿಕ್ಕಿದೆ.

Nefarious Anti-indian Activities

*(). —684. Sri M. BASAVARAJU (Krishnarajanagar).—

Will the Minister for Home and Labour be pleased to state.—

(*a*) whether Government is aware of the nefarious Anti-Indian Activities of the C.I.A. and 'Peace Corps' in Mysore State ;

(*b*) whether any investigations have been conducted by the State Government in respect of such activities ;

(*c*) if so, the results of such investigations the steps taken by the Government to put down such anti-Indian activities of the C. I.A. and 'Peace Corps' ?